


**ಕಥಕ್ ನೃತ್ಯದಲ್ಲಿ ವಿಶ್ವವಿಖ್ಯಾತರಾದ ಪಂಡಿತ್ ಬಿರ್ಜು ಮಹಾರಾಜ್ ಭಾರತೀಯ ನೃತ್ಯ ಪರಂಪರೆಯ ಅನರ್ಘ್ಯ ರತ್ನ. ಕಥಕ್, ಹಿಂದೂಸ್ತಾನಿ ಗಾಯನ, ತಬಲಾ, ಡ್ರಮ್ಸ್ ವಾದನಗಳಲ್ಲೂ ಪ್ರಾವೀಣ್ಯರಾಗಿದ್ದ ಅವರು ಜ. 17ರಂದು ಇಹಲೋಕ ತ್ಯಜಿಸಿದ್ದಾರೆ. ನೃತ್ಯ ಜಗತ್ತಿನಲ್ಲಿ ಅಚ್ಚಳಿಯದ ಹೆಜ್ಜೆಗುರುತು ಮೂಡಿಸಿರುವ ಮಹಾಗುರುವಿನ 'ಅಮರ ಹೆಜ್ಜೆ'ಗಳ ಪುಟ್ಟ ಅವಲೋಕನ.**

■ ಉಮಾ ಅನಂತ್

# ಅಮರ ಹೆಜ್ಜೆಗಳ ಕಥಕ್ ಮಾಂತ್ರಿಕ

## ದೇಸಿ ಕಲೆಯನ್ನು ಪ್ರೀತಿಸುತ್ತಿದ್ದ ನೃತ್ಯಗುರು

ಪಂ. ಬಿರ್ಜು ಮಹಾರಾಜ್ ಅವರ ಹಿರಿಯ ಶಿಷ್ಯೆ ಬೆಂಗಳೂರಿನ ವಿದುಷಿ ಸಿಮ್ರನ್ ಗೋದ್ವಾನಿ ತಮ್ಮ ಗುರುವಿನ ಒಡನಾಟದ ಕುರಿತು 'ಸುಧಾ'ದೊಂದಿಗೆ ಮಾತನಾಡಿದ್ದಾರೆ.

● **ಪಂ. ಬಿರ್ಜು ಮಹಾರಾಜ್ ಅವರು ನೃತ್ಯ ವಿದ್ಯಾರ್ಥಿಗಳಿಗೆ ಮಾದರಿಯಾಗಿದ್ದುದು ಹೇಗೆ?**

ಜಗತ್ತಿನಾದ್ಯಂತ ದೊಡ್ಡ ಶಿಷ್ಯ ಸಮೂಹವನ್ನು ಹೊಂದಿರುವ ಬಿರ್ಜು ಮಹಾರಾಜ್ ಬಹಳ ಸ್ನೇಹಜೀವಿ. ಆದರೆ ಕಲಿಸುವಾಗ ಬಹಳ ಶಿಸ್ತು. ಕಟ್ಟುನಿಟ್ಟು. ನೃತ್ಯದ ತಾಂತ್ರಿಕ ಅಂಶಗಳನ್ನು ವಿವರಿಸಿ, ಅಭಿನಯ ಕಲೆಯನ್ನೂ ಬಹಳ ಸೊಗಸಾಗಿ ಹೇಳಿಕೊಡುತ್ತಿದ್ದರು. ಅವರಿಂದ ನೃತ್ಯ ಕಲಿತ ಹಲವಾರು ಶಿಷ್ಯಂದಿರು ಇಂದು ದೇಶ ವಿದೇಶಗಳಲ್ಲಿದ್ದಾರೆ. ನೃತ್ಯ ಕಲಿಸುವಾಗ ತಪ್ಪಿದರೆ ಎಂದೂ ಗದರುತ್ತಿರಲಿಲ್ಲ. ಪ್ರೀತಿಯಿಂದ ಸರಿಪಡಿಸುತ್ತಿದ್ದರು. ನೃತ್ಯದ ಚಲನೆ, ಅಭಿನಯ, ನಡೆ, ಭಾವಭಂಗಿಗಳನ್ನು ತಿದ್ದಿ ಮತ್ತೆಂದೂ ಆ ತಪ್ಪು ಮಾಡದಂತೆ ಪ್ರೋತ್ಸಾಹಿಸುತ್ತಿದ್ದರು. ಅವರ ಬಳಿ ನೃತ್ಯ ಕಲಿಯುವ, ಅವರ ಮುಂದೆ ವೇದಿಕೆಯಲ್ಲಿ ನೃತ್ಯ ಪ್ರದರ್ಶಿಸುವ, ಅವರದೇ ಕೊರಿಯೊಗ್ರಫಿ ಹಾಗೂ ಸಂಗೀತ ಸಂಯೋಜನೆಯ ನೃತ್ಯ ಭಾಗಗಳನ್ನು ಪ್ರಸ್ತುತಪಡಿಸುವ ಅವಕಾಶ ದೊರಕಿದ್ದು ನನ್ನ ಸುದೈವ.

● **ದೇಸಿ ಕಲೆ, ಸಂಸ್ಕೃತಿ, ಪರಂಪರೆ ಬಗ್ಗೆ ಅವರಿಗೆ ಎಲ್ಲಿಲ್ಲದ ಒಲವು. ನಿಮ್ಮ ಜೀವನದಲ್ಲಿ ಈ ಮಾತನ್ನು ಸಮರ್ಥಿಸುವಂತಹ ಯಾವುದಾದರೂ ಘಟನೆ ನೆನಪಿಸುವಿರಾ?**

ಒಮ್ಮೆ ಮಹಾರಾಜ್ ಅವರು ನೃತ್ಯ ಕಾರ್ಯಾಗಾರವೊಂದರಲ್ಲಿ ಭಾಗವಹಿಸಲು